# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ</u>

ಓಎಸ್.24–2012

ಪಿ.ಡಬ್ಲ್ಯೂ.1

ಹೆಸರು ಃ ಗೌರಮ್ಮ

ಪ್ರಮಾಣೀಕೃತ ದಿನಾಂಕಃ–26.06.2018

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ–**

ನನಗೆ ಈಗ ವಯಸ್ಸು ಸುಮಾರು 72 ವರ್ಷ ಆಗಿದೆ ಎಂದರೆ ಇರಬಹುದು. ನಮ್ಮ ತಾಯಿ ಮೃತಪಟ್ಟು ಇಂದಿಗೆ ಸುಮಾರು 40 ವರ್ಷ ಆಗಿದೆ ಎಂದರೆ ಸರಿ. ನಮ್ಮ ತಂದೆ ಮೃತಪಟ್ಟು ಇಂದಿಗೆ ಸುಮಾರು 60 ವರ್ಷ ಆಗಿದೆ ಎಂದರೆ ಇರಬಹುದು. ನಮ್ಮ ತಂದೆ ಮೃತಪಟ್ಟಿರುವುದು ನನಗೆ ನೆನಪಿಲ್ಲ. ನನ್ನ ಅಕ್ಕಂದಿರು ಮೃತಪಟ್ಟು ಈಗ ಸುಮಾರು 40 ವರ್ಷಗಳು ಆಗಿದೆ ಎಂದರೆ ಇರಬಹುದು.

ದಾವಾ ಆಸ್ತಿ ಸ್ವತ್ತು ಸರ್ವೆ ನಂ. 133/03 ಐಟಂ ನಂ. 2 ಇದರು ಚೆನ್ನಪ್ಪನಿಗೆ ಕ್ರಯದ ಮೂಲಕ ಬಂದಿದೆ ಎಂದರೆ ಸರಿ. ಸದರಿ ಸ್ವತ್ತನ್ನು ಖರಿದಿಸಿ ಸುಮಾರು 40–50 ವರ್ಷವಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಚಕ್ಕು ಬಂದಿ ಹೇಳಲಾಗುವುದಿಲ್ಲ. ದಾವೆಗೆ ಮಾಹಿತಿ ನೀಡುವಾಗ ಗೊತ್ತಿದ್ದು ಈಗ ಮರೆತು ಹೋಗಿರುತ್ತೇನೆ. ದಾವಾ ಐಟಂ ನಂ. 4 ರ ಆಸ್ತಿ ಸಂಖ್ಯೆ ಗೊತ್ತಿಲ್ಲ. ಸದರಿ ಸ್ವತ್ತು ಚೆನ್ನಪ್ಪನ ಹೆಸರಿನಲ್ಲಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ.

ಸದರಿ ಸ್ವತ್ತು ಚೆನ್ನಪ್ಪನ ಹೆಂಡತಿಗೆ ಸರ್ಕಾರದಿಂದ ಮಂಜೂರಾಗಿದೆ ಎಚೆದರೆರ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಒಂದು ಮನೆಯಿದೆ ಎಂದರೆ ಸರಿ. ಆ ಮನೆ ಹೊರತು ಪಡಿಸಿ ಅವರಿಗೆ ಯಾವುದೇ ಬೇರೆ ಮನೆಯಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 1 ಚೆನ್ನಪ್ಪನಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಿಚಾರ ಏನು ಗೊತ್ತಿಲ್ಲ ಎಂದರೆ ಸರಿ. ಚೆನ್ನಪ್ಪನಿಗೆ ಆಗದೆಯಿರುವವರು ನನ್ನ ಮುಖಾಂತರ ಈ ದಾವೆಯನ್ನು ಹೂಡಿಸಿದ್ದಾರೆ ಎಂದರೆ ಸರಿಯಲ್ಲ.

ನನಗೆ ಸದರಿ ದಾವಾ ಆಸ್ತಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಅಧೀಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಎಲ್ಲಾ ದಾಖಲಾತಿಗಳು 6ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸರಿ. ನಾವು ದಾವಾ ಆಸ್ತಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಬಂಗಾರಪೇಟೆಯಿಂದ ಮುಗಬಾಳ 50 ಕಿ.ಮೀ. ಇದೆ ಎಂದರೆ ಇರಬಹುದು. 6ನೇ ಪ್ರತಿವಾದಿಗಳ ಹೆಸರಿನಲ್ಲಿರುವ ದಾಖಲಾತಿಗಳನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲಿಸಿಲ್ಲ ಎಂದರೆ ಸರಿ.

ನಿಪಿ.1ನ್ನು ಕೋರಿ ನಾನು ಚೆನ್ನಪ್ಪನಿಗೆ ಅರ್ಜಿ ಸಲ್ಲಿಸಿರುತ್ತೇನೆ. ಅರ್ಜಿ ಯಾವಾಗ ಸಲ್ಲಿಸಿದ್ದೇನೆ ಎಂದು ಈಗ ನನಗೆ ನೆನಪಿಲ್ಲ. ನನಗೆ ನಿಪಿ.1ನ್ನು ಪಿರುಮಾಳಪ್ಪ ಮತ್ತು ಮುನಿರಾಜುರವರು ಬರೆಸಿಕೊಟ್ಟಿದ್ದಾರೆ ಎಂದರೆ ಸರಿ. 1 ರಿಂದ 5ನೇ ಪ್ರತಿವಾದಿಗಳು ಮತ್ತು ನಾನು ಸೇರಿ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿ. ನಾನು ಒಟ್ಟು ಕುಟುಂಬದ ಸದಸ್ಯ ಅಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**